## ಬೊಂಬೆಗಳ ಕ್ರಿಕೆಟ್ ಹಬ್ಬ!

ದಸರಾ ಎಂದರೆ ಗೊಂಬೆ ಕೂರಿಸುವ ಕಾಲ. ಕಾಲಕಾಲಕ್ಕೆ ಹೊಸತನ್ನು ಒಳಗೊಳ್ಳುತ್ತಾ ಮುಂದುವರೆದಿರುವ ಈ ಸಂಪ್ರದಾಯದಲ್ಲಿ ನಮ್ಮ ಕ್ರಿಕೆಟ್ಟೂ ಸೇರಿದರೆ ಅದೆಷ್ಟು ಚೆನ್ನ. ನವರಾತ್ರಿಯ ಮೊದಲ ದಿನ ಆಂಧ್ರದ ಸ್ನೇಹಿತರ ಮನೆಗೆ ಹೋಗಿದ್ದೆ. ಅವರ ಮನೆಯ ಬಾಗಿಲಲ್ಲೇ ಎದುರುಗೊಂಡ ಗೊಂಬೆ ಅಲಂಕಾರದಲ್ಲಿ ನಮ್ಮ ಕ್ರಿಕೆಟ್ಟಿಗೂ ಜಾಗ ಸಿಕ್ಕಿತ್ತು. ಒಟ್ಟು ಹನ್ನೊಂದು ಗೊಂಬೆಗಳಲ್ಲಿ ಎರಡು ಅಂಪೈರ್‌ಗಳಾದರೆ ಉಳಿದ ಒಂಬತ್ತು ಗೊಂಬೆಗಳು ನವರಾತ್ರಿಯ ಪ್ರತೀಕವೆಂಬಂತೆ ನಳನಳಿಸುತ್ತಿದ್ದವು. ಇನ್ನಿಬ್ಬರು ಆಟಗಾರರನ್ನು ತಂಡದಿಂದ ಕೈಬಿಟ್ಟಿದ್ದರ ಹಿಂದಿನ ಕಾರಣ ಗೊತ್ತಾಗಲಿಲ್ಲ. ಸದ್ಯ ದೇಶದಲ್ಲಿ ವಿಶ್ವಕಪ್ ಕ್ರಿಕೆಟ್ ನಡೆಯುತ್ತಿದೆ. ಟೂರ್ನಿಯಲ್ಲಿ ಪ್ರತಿ ತಂಡವೂ ಮೊದಲ ಸುತ್ತಿನಲ್ಲಿ ಒಂಬತ್ತು ಪಂದ್ಯಗಳನ್ನು ಆಡಲಿವೆ. ಈ ಕಾರಣಕ್ಕೆ ಒಂಬತ್ತೇ ಆಟಗಾರರನ್ನು ಸ್ನೇಹಿತರು ಅಖಾಡಕ್ಕೆ ಇಳಿಸಿರಬಹುದು ಅಂದುಕೊಂಡೆ. ಇಡೀ ದೃಶ್ಯವು, ಈ ಬಾರಿಯ ವಿಜಯದಶಮಿ ವಿಶ್ವಕಪ್ ವಿಜಯಪತಾಕೆ ಭಾರತದ್ದೇ ಎಂದು ಸೂಚಿಸುತ್ತಿರಬಹುದೇ?

–ವಾ.ಮುರಳೀಧರ, ತೀರ್ಥಹಳ್ಳಿ





## ಕೆಂಪು ರೆಕ್ಕೆಯ ಕಪ್ಪು ಹಕ್ಕಿ

ಅಮೆರಿಕದ ವಾಷಿಂಗ್ಟನ್ ರಾಜ್ಯದ ಬೆಲ್ ವ್ಯೂ ಪಟ್ಟಣದ ಫಾರ್ಮ್ ಒಂದಕ್ಕೆ ವಾಕಿಂಗ್ ಹೋದಾಗ ಕಣ್ಣಿಗೆ ಬಿದ್ದದ್ದು ಈ ಹಕ್ಕಿ. ಕ್ಯಾಮೆರಾ ಜೊತೆಯಲ್ಲಿಯೇ ಇದ್ದುದರಿಂದ ಇದರ ಚಿತ್ರ ತೆಗೆಯಲು ಸಾಧ್ಯವಾಯಿತು. ನಮ್ಮಲ್ಲಿಯ ಕಾಗೆಯಂತೆಯೇ ಕಾಣುವ ಈ ಹಕ್ಕಿ ಕಾಗೆಯಲ್ಲ. ಇದರ ಎರಡೂ ರೆಕ್ಕೆಗಳ ಬುಡದಲ್ಲಿ ಯಕ್ಷಗಾನ ವೇಷಧಾರಿಗಳು ಧರಿಸುವಂತಹ, ಭುಜಕೀರ್ತಿಯಂತೆ ಕಾಣುವ ಬಣ್ಣದ ತೇಪೆಯಿದೆ. ಕೆಂಪು ತೇಪೆಯ ತುದಿಯಲ್ಲಿ ಹಳದಿ ಪಟ್ಟಿಯಿದೆ. ಈ ಬಣ್ಣದಿಂದಲೇ ಈ ಜಾತಿಯ ಹಕ್ಕಿಗಳಿಗೆ 'ರೆಡ್ ವಿಂಗ್ಡ್ ಬ್ಲಾಕ್ ಬರ್ಡ್' (ಕೆಂಪು ರೆಕ್ಕೆಯ ಕಪ್ಪು ಹಕ್ಕಿ) ಎನ್ನುವ ಹೆಸರು ಬಂದಿದೆ. ಗಂಡು ಹಕ್ಕಿಗಳಿಗೆ ಮಾತ್ರ ಈ ಬಣ್ಣದ ಅಲಂಕಾರವಿದೆ. ಹೆಣ್ಣು ಹಕ್ಕಿಗಳು ಅನಾಕರ್ಷಕ ಕಪ್ಪು ಕಂದು ಬಣ್ಣ ಹೊಂದಿವೆ. ಈ ಹಕ್ಕಿಗಳು ಕಾಣಿಸಿಕೊಂಡು ಹಾಡಲಾರಂಭಿಸಿದರೆ ವಸಂತ ಕಾಲದ ಮುನ್ಸೂಚನೆ ಎಂದು ಇಲ್ಲಿ ಭಾವಿಸುತ್ತಾರೆ. ಪೊದೆಗಳಲ್ಲಿ, ಕೆಲವೊಮ್ಮೆ ಜೊಂಡು ಹುಲ್ಲುಗಳ ಮಧ್ಯೆ ಇವು ಗೂಡು ಕಟ್ಟುತ್ತವೆ. ಗೂಡು ಕಟ್ಟುವ ಕೆಲಸ ಹೆಣ್ಣಿನದು; ಸಾಮಾನ್ಯವಾಗಿ 2–4 ಮೊಟ್ಟೆಗಳನ್ನಿಡುತ್ತದೆ. ಮೊಟ್ಟೆ ಇಟ್ಟ ಮೇಲೆ ಹೆಣ್ಣು ಗಂಡುಗಳೆರಡೂ ಸೇರಿ ಗೂಡನ್ನು ರಕ್ಷಿಸುತ್ತವೆ. ಇವುಗಳ ಸಂಖ್ಯೆ ಸಾಕಷ್ಟಿದ್ದರೂ, ವರ್ಷದಿಂದ ವರ್ಷಕ್ಕೆ ಕ್ಷೀಣಿಸುತ್ತಿದೆಯಂತೆ.

–ಜಿ. ನಾರಾಯಣ

## ಬಿಳಿಚುಕ್ಕೆಗಳ ವಿಚಿತ್ರ ಜೀರುಂಡೆ

ನಮ್ಮ ಮನೆಯ ಮುಂಭಾಗದಲ್ಲಿ ನಿಧಾನವಾಗಿ ಹೆಜ್ಜೆ ಹಾಕುತ್ತಾ, ಅತ್ತಿಂದಿತ್ತ, ಇತ್ತಿಂದತ್ತ ಓಡಾಡುತ್ತಿದ್ದ ಈ ಕೀಟದ ಹೆಸರು 'ಪ್ರೋಟೇಟಿಯಾ ಅಲ್ಬೊಗುಟ್ಟಾಟಾ'. ಹೆಸರೇ ವಿಚಿತ್ರ ಎನಿಸುತ್ತದೆ. ಈ ಕೀಟ ಹೆಚ್ಚಾಗಿ ಭಾರತ, ನೇಪಾಳ, ಶ್ರೀಲಂಕಾ ದೇಶಗಳಲ್ಲಿ ಕಂಡುಬರುತ್ತದೆ. ಇದು ಹೂವಿನ ಚೇಫರ್ ಜಾತಿಗೆ ಹಾಗೂ ಸ್ಕಾರಬೈಡೆ ಎಂಬ ಕುಟುಂಬಕ್ಕೆ ಸೇರಿದೆ. 'ಪ್ರೋಟೇಟಿಯಾ ಅಲ್ಬೊಗುಟ್ಟಾಟಾ' ಬದನೆಯಂತಹ ಗಿಡಗಳನ್ನು ತಿಂದು ಬದುಕುವ ಜೀರುಂಡೆ. ಜೊತೆಗೆ ಬದನೆ ಗಿಡದ ಮೊಗ್ಗು, ಹೂವುಗಳನ್ನು ಹೆಚ್ಚಾಗಿ ಸೇವಿಸುತ್ತದೆ. ಇವುಗಳ ಮತ್ತೊಂದು ವಿಶೇಷವೆಂದರೆ ಮುಂಜಾವಿನಲ್ಲಿ ಹೆಚ್ಚಾಗಿ ಆಹಾರದ ಬೇಟೆಗೆ ಹೊರಡುವುದು. ಆರು ಕಾಲುಗಳು, ತಲೆಯ ಮೇಲೆ ಎರಡು ಪುಟ್ಟ ಕೊಂಬುಗಳು, ಎಲೆಯ ಹಚ್ಚ ಹಸಿರು ಬಣ್ಣ, ದೇಹದ ಮೇಲೆಲ್ಲಾ ಬಿಳಿ ಬಣ್ಣದ ಚುಕ್ಕೆಗಳನ್ನು ಹೊಂದಿರುವ ಇದು ಕ್ಷಣಕಾಲ ಕುತೂಹಲ ಕೆರಳಿಸಿತು.

–ದೀಪಶ್ರೀ ಎಸ್., ಕೂಡ್ಲಿಗಿ

